ISSN: 2347-2723 IMPACT FACTOR : 3.3754(UIF) VOLUME - 5 | ISSUE - 1 | AUGUST - 2017

REVIEW OF LITERATURE

# ಶೈಲಜಾ ಉಡಚಣ ಕಾವ್ಯಗಳಲ್ಲಿ, ಹಬ್ಬ, ನಿರ್ಧಾರ, ವಿಧಾನ ಸೌಧ



ಡಾ. ಶಿವಗಂಗಾ ಯು. ಬಿಲಗುಂದಿ
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಭಾರತ ಹೈದರಾಬಾದ ಕರ್ನಾಟಕದ ಮಹತ್ವದ ಕವಿಯಿತ್ರಿ. ಇವರು ೧೯೩೫ ಜುಲೈ ೭ರಂದು ಜನಿಸಿದ್ದಾರೆ. ಇವರ ತಂದೆ ಗುರುಮಲ್ಲಪ್ಪ, ತಾಯಿ ಪಾರ್ವತಿ, ಶೈಲಜಾ ಉಡಚಣರವರು ಸಮಕಾಲೀನ ಸಮಾಜದ ಸೂಕ್ಷ್ಮಗಳನ್ನು ಇವರ ಕವನಗಳು ಅಭಿವ್ಯಕ್ತಪಡಿಸಿದ್ದಾರೆ. ಸ್ತ್ರೀ ಪರವಾದ ಧೋರಣೆ, ಚಿಂತನಶೀಲತೆ, ಅಸಮಾನತೆಯ ಸಮಾಜ, ಇವರ ಕಾವ್ಯದ ಮುಖ್ಯ ಕಾಳಜಿಗಳಾಗಿವೆ. ಅನುಭವಗಳ ಅಭಿವ್ಯಕ್ತಿಯಲ್ಲಿ ಸಮನ್ವಯತೆ, ಸಮತೂಕಗಳನ್ನು ಇವರ ಕಾವ್ಯ ಕಾಯ್ದುಕೊಂಡಿರುವುದು ತಿಳಿಯುತ್ತದೆ.

ಶೈಲಜಾ ಉಡಚಣರಿಗೆ "ಯುಗಾದಿ' ಹರುಷ, ಹೊಸತನ ತರುವುದಿಲ್ಲ. ಬದಲಾಗಿ, ಅಂದು ಹಣೆಗೆ ಕೈ ಹಚ್ಚಿ ಕುಳಿತವರ ನೋವು, ನಿರಾಸೆಗಳನ್ನು ವ್ಯಕ್ತಪಡಿಸಿದ್ದಾರೆ.

"ಯುಗಾದಿಯನ್ನು ಕುರಿತು ಬರೆಯಲು
........................................................
........................................................
ಮಾತು – ಮನಗಳ ದಾಂಪತ್ಯವೇ !"[೧]

ಯುಗಾದಿಯನ್ನು ಕುರಿತು ಬರೆಯಲು ಹೊರಟ ಕವಿಯಿತ್ರಿಗೆ ಯುಗಾದಿ ಹೊಸ ಹರುಷ ಹೊಸತನ ತರುವುದಿಲ್ಲ. ಹೂಬಳ್ಳಿ ಚಂದ್ರಮ ಕಾಣಿಸುವುದಿಲ್ಲ. ಮನೆಯ ಮುಂದಿನ ಮಾವು ಬೇವು ಮಾತನಾಡುವದಿಲ್ಲ. ಶತಮಾನಗಳಿಂದ ಸಾಗಿ ಬಂದ ಕಂಬನಿಯ ಕತೆಗೆ ಕೊನೆ ಸಿಕ್ಕಲಿಲ್ಲ. ಅಂದು ಹಣೆಗೆ ಕೈ ಹಚ್ಚಿ ಕುಳಿತವರು ನೋಳವು ನಿರಾಸೆಗಳನ್ನು ಕಾಣುವರು. ಅವ್ಯವಸ್ಥೆಯ ಹೊಂಡ ಕೆಂಡ ದುಖಿಡಿಯ ಅಗ್ನಿ ಕುಂಡ ಕಾಣುವುದು. ಕವಿಗಳ ಅಂತರಂಗದಲ್ಲಿ ಉಂಟಾದ ತಳಮಳವು ಹೊಸ ಯುಗಾದಿ ಬಿಸಿ ರಕ್ತದ ಫಲವೋ ಅಥವಾ ಕತೆಯಂತೆ ಜತೆಯಲ್ಲಿ ಬಂದು ಹೋಗುವ ಕ್ರಾಂತಿ ಕಾವ್ಯವೋ? ಮೌನ ಮಥನದಲ್ಲಿ ಮಥಿಸುತ್ತಿರುವ ಮಾತು ಮನಗಳ ದಾಂಪತ್ಯವೇ ಕವಿಯು ಗೊಂದಲಕ್ಕೆ ಒಳಗಾಗುವರು.

"ನನಗೆ ಯುಗಾದಿ ಬಂದಿರುವುದು ಇತಿಹಾಸದಲ್ಲಿ
........................................................
........................................................
ಎಳಿ ಎದ್ದೇಳಿ! ಎಂದೂ ಕೂಗಿ ಕರೆಯಲು ಬದ್ಧವಾಗಿದೆ"[೨]

ಇತಿಹಾಸದಲ್ಲಿ ಯುಗಾದಿ ಬಂದಿರುವುದು ಕೇವಲ ಕೆಲವು ಸಲ. ಇದೀಗ ಅದಕ್ಕೊಂದು ಹೊಸ ತಿರುವ ಬಂದಿದೆ. ಬದುಕಿನ ಅರ್ಥಕ್ಕೆ ಹೊಸ ರೂಪ ತಂದಿದೆ. ಎಂದುಕೊಂಡು ಕವಿಗಳಿಗೆ ಸುತ್ತಲೆಲ್ಲ ಶಿಖಂಡಿಗಳೇ ಕಾಣುತ್ತಾರೆ. ಆರಂಭದಲ್ಲಿ ಆರ್ಕಿಯೋಟೆರಿಕ್ಸ್ ಆಗಿದ್ದವರು ಬರುಬರುತ್ತ ಒಂದೊಂದು ಬಿಟ್ಟು ರಕ್ತ ಹೀರುವ ರಣ ಹದ್ದುಗಳು ಆಗಿದ್ದಾರೆ. ಗೋರಿ ಪ್ರಿಯರಾಗಿ ಗೊಮ್ಮಟವನ್ನು ಮರೆತಿದ್ದಾರೆ. ಹಳೆ ಬೀಡಿನ ಕುಸುರಿ ಕತ್ತರಿಯಲ್ಲಿ ಸವೆಸಿದ್ದಾರೆ. ಕಾಲಬಂದಾಗ ಕೊಳೆ ಕಸವನ್ನು ಗೊಬ್ಬರ ಮಾಡಿ ಮಂಜು ಸರಿಸಿ ಹೊಸ ಸೃಷ್ಟಿಯು ಆಘುವುದು ಎಳಿ ಎದ್ದೇಳಿ ಎಂದು ಎಚ್ಚರದ ಕೂಗು ಕರೆಯಲು ಬದ್ಧವಾಗಿದೆ ಎಂಬುವುದು ಕವಿಯು ವ್ಯಕ್ತಪಡಿಸಿದ್ದಾರೆ. ಕವಯತ್ರಿಯು ಕ್ರಾಂತಿಗೆ ಹಾರೈಸುತ್ತಲೇ ವ್ಯವಸ್ಥೆಯು ಸುಧಾರಿಸುವದೆಂಬ ಭರವಸೆ ತಾಳುವುದು ದ್ವಂದ್ವ ನಿಲುವನ್ನು ತಿಳಿದು ಬರುತ್ತದೆ.

"ನೂರು ಮೋಡಗಳ ಮಧ್ಯೆ
.......................................
.......................................
ಗಗನ ಮುಟ್ಟಲಿ ಎಂದು ಮಂತ್ರಿಸುವ ಮೋಡಿ ನನ್ನದು."[೩]

ಕವಯತ್ರಿಯು ಕನಸು ಫಲ ನೀಡುವಂತೆ ಮಾಡುವವರು, ಅನುಭವಿಸುವರು, ಕೃತಾರ್ಥರಾಗುವರು ನೂರು ಮೋಹಗಳ ಮಧ್ಯದಲ್ಲಿ ಚಕ್ಕನೆ ಬರುವ ಮಿಂಚಿನ ಗೆರೆಯನ್ನು ಬಾನಿನಲ್ಲಿ ಕಟೆಯಲು ಹವಣಿಸುತ್ತಾರೆ. ಚೆಲುವಿನಹೂ ಅರಳಿ ಹೆಮ್ಮೆಪಡುವರು. ಹರಿದು ಬಂದ ಅಬ್ಬರಗಳ ಸಾಲಿನಲ್ಲಿಯೇ ಹೆದ್ದಾರಿಯನ್ನು ಕೊರೆಯಬೇಕೆನ್ನುವರು. ನೇತಾಡುವ ಹೆಣಗಳನ್ನು ನೋಡಿ ಮಾರುದೂರ ಸರಿದರೂ ಹಗ್ಗ ಕಟ್ಟಿ ಜಗ್ಗಿ ಜೀವ ತುಂಬ ಬೇಕೆನ್ನುವರು. ಗುಡ್ಡದ ಮೇಲೆ ಗುಡ್ಡೆ ನಿಲ್ಲಿಸಿ ಗೊಮ್ಮಟವನ್ನು ಕಟೆಯವ ಶಿಲ್ಪಿ ನಾನಲ್ಲವಾದರೂ ಮಲಗಿದ್ದಲ್ಲಿಯೇ ಮೂರ್ತಿ ಗಗನ ಮುಟ್ಟಲಿ ಎಂದು ಮಂತ್ರಿಸುವ ಮೋಡಿ ನನ್ನದು ಎಂದು ಕವಯತ್ರಿಯ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

"ಕಾಡು ಕಡಿದು, ತುರುಚಿ ತರುಬಿ
.......................................
.......................................
ಹಾರೈಸು ಹಾರೈಸು ಎಂದು ಸಂತೈಸುತ್ತೇನೆ."[೪]

ಕಾಡು ಕಡಿದು ತರುಚಿ ತರುಬಿ ಕಂಟಿ ಕವಲುಗಳನ್ನೆಲ್ಲ ಬುಲ್‌ಡೋಜರನಿಂದ ಸವರಲಾರೆನಾದರೂ ದೇವದಾರುವಿನಡಿಯಲ್ಲಿ ಹುಟ್ಟಿ ಬೆಳೆದ ತಲೆ ಎತ್ತಿದ ಕನಸು ಮಾತ್ರ ನನ್ನದು. ಮೈಯೆಲ್ಲ ಮೆತ್ತಿರುವ ಈ ಕತ್ತಲೆಯ ಕತ್ತಿ ವರಸೆಯಲ್ಲಿ ಒಂದೊಂದೆ ಪದರ ಚರ್ಮ ಸುಲಿದು ನಿರಾಳದ ನಿರ್ಧಾರ ಇಣುಕಿದರೂ ಹದವಿಲ್ಲದ ಬಾಳು, ಕುದಿದು ಕುದಿದು ಸಣ್ಣಾದ ಸೀಳು ದಾರಿ ಹೆದ್ದಾರಿಗಾಗಿ ಕಾದು ಕಾದು ಗಜ ಗಮನಕ್ಕಾಗಿ ಹಾರೈಸು ಎಂದು ಸಂತೈಸುತ್ತೇನೆ ಎನ್ನುವರು. ಕಾಲ ಕೂಡಿ ಬಂದಾಗ ಕನಸು ನನಸಾಗುವದೆಂಬ ಆಶಾಭಾವ ಕವಿಗಳದ್ದು.

"ಸಾವಿರ ಜನರ ಮಧ್ಯದಲ್ಲಿದ್ದು ಒಂಟಿಯಾಗಿ
.......................................
.......................................
ಒಳ ಸೇರುವುದು ನಿಲ್ಲುವುದಿಲ್ಲ."[೫]

ಕವಯತ್ರಿಯವರು ಬೆಂಗಳೂರಿನ ವಿಧಾನ ಸೌಧದ ಒಳ ಹೊರಗಿನ ಬದುಕನ್ನು ಹಾಗೂ ವ್ಯವಸ್ಥೆಯನ್ನು ಎಳೆ ಎಳೆಯಾಗಿ ತೆರೆದಿಟ್ಟಿದ್ದಾರೆ. ಸಾವಿರ ಸಾವಿರ ಜನರಿದ್ದರೂ ಯಾರಿಗೂ ಯಾರು ಸಂಬಂಧವಿಲ್ಲದಂತೆ ಒಂಟಿಯಾಗಿ ನಿಲುವುದೇ ಇಲ್ಲಿ ರೂಢಿ. ನೌಕರರು ತಾವು ಡಬ್ಬಿಯಲ್ಲಿ ತಂದ ತಿಂಡಿಯನ್ನು ಸುತ್ತ ಮುತ್ತ ನೋಡದೆ ಕಣ್ಣು ಮುಚ್ಚಿಕೊಂಡು ಗಬಗಬನೇ ತಿನ್ನುವುದೇ ಒಂದು ಮೋಡಿ. ಭ್ರಷ್ಟಾಚಾರ ಹಣ ತಿನ್ನುವ ವ್ಯವಹಾರ ನಿತ್ಯವೂ ನಡೆಯುತ್ತದೆ. ಯಾರಿಗೆ ಯಾರೋ ಪುರಂದರ ವಿಠಲ ಹೇಳಿ ಮಾಡಿಸಿದ ವಿರಕ್ತಿ ಅಲ್ಲಿಯ ಜನರಿಗೆ ವಿಧಾನ ಸೌಧದ ಸುತ್ತಲೂ ಕುರಿಗಳು ನರಿಗಳ ಗುಂಪು ಅಲ್ಲಲ್ಲಿ ಮದಗಜಗಳ ಗುಂಪು ತಿರುಗುತ್ತಿರುತ್ತವೆ. ಅವು ತಿನ್ನುವ ಕೆಲಸದಲ್ಲಿಯೇ ಮಗ್ನವಾಗಿರುತ್ತವೆ. ಆದರೂ ಅವುಗಳ ಒಳ್ಳೆಯ ಗುಣವೆಂದರೆ ತಿಂದು ಕೂಗುವುದಿಲ್ಲ. ಗುಳಮ್ಮನೆ ನುಂಗಿ ಬಾಯಿಗೆ ಕೈಸವರಿ ನಿಲ್ಲದೆ ಕಚೇರಿ ಕೊಠಡಿಗೆ ಹೋಗಿ ಸೇರುತ್ತವೆ.

"ದಕ್ಕಿದ ಅವಕಾಶದಲ್ಲೇ ತಕ್ಕ ವ್ಯವಹಾರ

........................................
........................................
ಚಿಗುರಿನ ಬನ ತುಂಬಿದ ಸಂಸ್ಕೃತಿಯ ಸೌಜನ್ಯ".[೬]

ದಕ್ಕಿದ ಅವಕಾಶದಲ್ಲಿ ತಕ್ಕ ವ್ಯವಹಾರವನ್ನು ಮಾಡಬೇಕು. ಒಳ ಸೇರಿದರೆ ಸಾಚಾ ವ್ಯಕ್ತಿಗಳಂತೆ ಮತ್ತು ಕೋಟಿಗೆ ಆತುಕೊಂಡು ಅಧಿಕಾರ ಬಿಗಿದ ಮೋರೆ ಸೆಟೆದ ಸೊಂಟ ನಗೆ ತುಸು ಹೊಗೆ ಹೊರಬರಲೋ ಬೇಡವೆಂಬ ಧಗೆ, ಸಂದರ್ಶನಕ್ಕೆ ಕಾಯ್ದು ಕುರಿಗಳಿಗೆಲ್ಲ ಬಂದಾಗೊಮ್ಮೆ ಬದನೆಕಾಯಿ ಪುರಾಣ ಬರೇ ಉಪದೇಶ ಭರವಸೆ ಆಶ್ವಾಸನೆಗಳನ್ನು ಕೊಟ್ಟು ಕಳಿಸುವ ಕಲೆ ಅವರಿಗೆ ರಕ್ತಗತವಾಗಿದೆ. ಒಮ್ಮೊಮ್ಮೆ ಶಾಸಕಾಂಗ, ಕಾರ್ಯಂಗ, ಮತ್ತು ನ್ಯಾಯಾಂಗಕ್ಕೆ ಸಂಘರ್ಷ ಉಂಟಾಗುವುದು ವಿಧಾನ ಸೌಧದ ವಾಸ್ತುಶಿಲ್ಪಿ ಅದರ ಅಂಗೋಪಾಂಗಗಳಲ್ಲಿ ಚಿಗುರಿದ ಬವ ತುಂಬಿದ ಸಂಸ್ಕೃತಿಯ ಸೌಜನ್ಯ ಹೊಂದಿರಬೇಕು ಎಂದು ವ್ಯಕ್ತಪಡಿಸಿದ್ದಾರೆ.

"ತಂಗಾಳಿಯಲ್ಲಿ ಪಿಸುಗುಟ್ಟುವ ಕಲಾಭಿನಯ
........................................
........................................
ಒಲವಿನ ಅಂಗಳಗಳಲಿ ಇನ್ನೂ"[೭]

ಇಂಪಾದ ಗಾಳಿಯೊಲ್ಲಿ ಕಿರುಧ್ವನಿಯಲ್ಲಿ ಕಲಾಭಿನಯವನ್ನು ನೋಡುವುದು. ಕತ್ತಲೆಯ ರಾತ್ರಿಗಳಲ್ಲಿ ತಾನೇ ತಾನಾದ ಚೆಲವು ನಯ ಗಾಂಭೀರ್ಯಕ್ಕೆ ಕಡೆಗೆ ಯಾರ ಗಮನ ಕೊಡುತ್ತಿಲ್ಲ. ತುತ್ತು ಅನ್ನಕ್ಕಾಗಿ ತನ್ಮಯರಾಗಿ ಕಲ್ಲು ಕಡೆಯ ವಿಧಾನ ಸೌಧವನ್ನು ಕಟ್ಟಿ ಕೋಟಿ ಕೋಟಿ ಜನರನ್ನು ಪುಳುಕಿತರಾಗುವಂತೆ ಮಾಡಲು ಕಾರಣರಾದ ಈ ಕಾವ್ಯಕಾರರು ಯಾರಿಗೆ ಬೇಕು? ಬಂದು ಹೋಗುವ ಯಾತ್ರಿಗಳು ಧ್ಯಾನಿಸಬಹುದು. ಅದರ ಅಂತರಂಗದ ನಿದ್ದೆಯ ಹೋಗುವ ಯಾತ್ರಿಗಳು ಧ್ಯಾನಿಸಬಹುದು. ಅದರ ಅಂತರಂಗದ ನಿದ್ದೆಯ ಚೆಲುವ ಗಳಿಗೆಗಳನ್ನು ಜಾತ್ರೆ, ಜಾತ್ರೆಗಳು ಸರಿದರೆ ಒಲವಿನ ಅಂಗಳೆಲ್ಲ ಬರಿದೋ ಬರಿದು ಎಂದು ಅಭ್ಯಿವ್ಯಕ್ತಪಡಿಸಿದ್ದಾರೆ.

**ಅಡಿ ಟಿಪ್ಪಣಿ**

೧ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೫೩
೨ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೫೩–೫೪
೩ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೫೫
೪ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೫೫–೫೬
೫ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೫೫–೫೬
೬ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೫೭
೭ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೫೭–೫೮
೮ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೫೮



**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.